# ವಸಂತ ಋತುವಿನ ರಹಸ್ಯ

ಭೂಮಿಯ ಮೇಲೆ ಮರದ ಎಲೆಗಳು ಉದುರಿದ ನಂತರ ವಸಂತ ಋತು ಆಗಮಿಸುವುದು ಸಾಮಾನ್ಯ ಘಟನೆ. ಆದರೆ ಹೀಗೇಕೆ ಆಗುತ್ತದೆ. ಎನ್ನುವುದಕ್ಕೆ ಗ್ರೀಸ್ ದೇಶದಲ್ಲಿ ಒಂದು ಕತೆ ಇದೆ.

ಗ್ರೀಸ್ ದೇಶದಲ್ಲಿ ಕೃಷಿಗೆ ಒಬ್ಬ ದೇವತೆ ಇದ್ದಾಳೆ. ಅವಳ ಹೆಸರು ಡೈಮೆಟರ್. ಅವಳಿಗೊಬ್ಬ ಸುಂದರವಾದ ಮಗಳಿದ್ದಳು. ಅವಳ ಹೆಸರು ಫಲೇರಿ. ಒಂದು ಬಾರಿ ಗ್ರೀಸ್ ದೇಶದಲ್ಲಿ ವಸಂತ ಋತುವಿನ ಆಗಮನವಾಗಿತ್ತು. ಮರಗಿಡಗಳು ಚಿಗುರಿದ್ದವು. ಹೂವುಗಳು ಅರಳಿದ್ದವು. ಬಣ್ಣ ಬಣ್ಣದ ಚಿಟ್ಟೆಗಳು ಎಲ್ಲೆಡೆ ಹಾರಾಡುತ್ತಿದ್ದವು. ಕೋಗಿಲೆ ತನ್ನ ಮಧುರ ಕಂಠದಲ್ಲಿ ಹಾಡುತ್ತಿತ್ತು.

ಆಗ ಸ್ವರ್ಗದಲ್ಲಿದ್ದ ಫಲೇರಿಗೆ ಭೂಲೋಕಕ್ಕೆ ಹೋಗಬೇಕೆನಿಸಿತು. ಅವಳು ತನ್ನ ತಾಯಿಗೆ ಗೊತ್ತಿಲ್ಲದಂತೆ ಅವಳ ಚಿನ್ನದ ರಥವೇರಿ ಭೂಲೋಕಕ್ಕೆ ಇಳಿದು ಬಂದಳು. ಅಲ್ಲಿ ಅವಳಿಗೆ ಒಂದು ಸುಂದರವಾದ ಉದ್ಯಾನ ಕಂಡಿತು. ಅದು ಗ್ರೀಸ್ ದೇಶದ ಅರಸನಾದ ಪ್ಲೆಟೋನ ಉದ್ಯಾನವನವಾಗಿತ್ತು. ಆ ಉದ್ಯಾನವನದಲ್ಲಿ ಬಣ್ಣಬಣ್ಣದ ಹೂಗಳು ಅರಳಿದ್ದವು. ಚಿಟ್ಟೆಗಳು ಹಾರಾಡುತ್ತಿದ್ದವು. ಮಂದ ಮಾರುತ ಬೀಸುತ್ತಿತ್ತು. ಉದ್ಯಾನದ ಅಂದಕ್ಕೆ ಮಾರುಹೋದ ಅವಳು ಅಲ್ಲೇ ವಿಹರಿಸತೊಡಗಿದಳು.

ಅರಸ ಪ್ಲೆಟೋ ಕೂಡ ವಿಹಾರಕ್ಕಾಗಿ ಅದೇ ಉದ್ಯಾನಕ್ಕೆ ಬಂದನು. ಆಗ ಅವನ ದೃಷ್ಟಿ ತನ್ನ ಉದ್ಯಾನದಲ್ಲಿ ಸಂಚರಿಸುತ್ತಿದ್ದ ಫಲೇರಿಯ ಮೇಲೆ ಬಿತ್ತು. ಅವಳ ಅಪ್ರತಿಮ ಸೌಂದರ್ಯವನ್ನು ಕಂಡು ಅರಸನು ಅವಳಲ್ಲಿ ಮೋಹಿತನಾದನು. ಉಪಾಯದಿಂದ ಅವಳನ್ನು ಅಪಹರಿಸಿ ತನ್ನ ಅರಮನೆಗೆ ಕೊಂಡೊಯ್ದು ಅವಳನ್ನು ವಿವಾಹವಾದನು.

ಇತ್ತ ಸ್ವರ್ಗದಲ್ಲಿ ತನ್ನ ಮಗಳು ಎಲ್ಲಿಯೂ ಕಾಣದಿದ್ದಾಗ ಡೈಮೆಟರ್ ಕೂಡ ಭೂಲೋಕಕ್ಕೆ ಇಳಿದು ಬಂದಳು. ಭೂಮಿಯ ಮೂಲೆ ಮೂಲೆಯಲ್ಲಿ ತನ್ನ ಮಗಳನ್ನು ಹುಡುಕಿದಳು. ಆದರೆ ಎಲ್ಲಿಯೂ ಅವಳಿಗೆ ತನ್ನ ಮಗಳು ದೊರೆಯಲಿಲ್ಲ. ನಿರಾಶಳಾದ ಅವಳು ಅಳುತ್ತ ಒಂದು ಮರದ ಕೆಳಗೆ ಕುಳಿತಳು. ಆಗ ಸೂರ್ಯ ದೇವ ಅವಳಿಗೆ ಅವಳ ಮಗಳು ಪ್ಲೆಟೋನ ಅರಮನೆಯಲ್ಲಿದ್ದಾಳೆ ಎಂದು ತಿಳಿಸಿದನು.

ತನ್ನ ಮಗಳನ್ನು ಪ್ಲೆಟೋ ಅಪಹರಿಸಿದ ವಿಷಯವನ್ನು ತಿಳಿದು ಡೈಮೆಟರ್ ಕ್ರುದ್ಧಳಾದಳು. ತನ್ನ ಮಗಳು ತನಗೆ ದೊರೆಯುವವರೆಗೆ ಭೂಮಿಯ ಮೇಲೆ ಯಾವ ಬೆಳೆಯೂ ಬೆಳೆಯಬಾರದೆಂದು ಆದೇಶವಿತ್ತಳು. ಅವಳು ಕೃಷಿ ದೇವತೆಯಾದುದರಿಂದ ಅವಳ ಆದೇಶದ ಪಾಲನೆಯಾಯಿತು.

ಬಿತ್ತನೆ ಕಾಲ ಬಂತು. ರೈತರು ತುಂಬ ಪರಿಶ್ರಮಪಟ್ಟು ಹೊಲವನ್ನು ಉತ್ತು ಬೀಜವನ್ನು ಬಿತ್ತಿದರು. ಆದರೆ ಬಿತ್ತಿದ ಬೀಜಗಳು ಮೊಳಕೆಯೊಡೆಯಲಿಲ್ಲ. ಭೂಮಿಯ ಮೇಲೆ ಹಾಹಾಕಾರ ಉಂಟಾಯಿತು. ದೇವತೆಗಳ ಅರಸನಾದ ಜ್ಯೂಪಿಟರ್ ಪ್ಲೆಟೋ ಹಾಗೂ ಡೈಮೆಟರ್ ಅವರ ಮಧ್ಯೆ ಒಪ್ಪಂದ ಮಾಡಿಸಲು ಪ್ರಯತ್ನಿಸಿದನು. ಆದರೆ ಡೈಮೆಟರ್ ತನ್ನ ಪಟ್ಟು ಸಡಿಲಿಸಲಿಲ್ಲ. ತನ್ನ ಮಗಳು ದೊರೆಯುವವರೆಗೆ ತಾನು ಭೂಮಿಯ ಮೇಲೆ ಒಂದು ಬೀಜವೂ ಮೊಳಕೆಯೊಡೆಯುವುದಕ್ಕೆ ಬಿಡುವುದಿಲ್ಲ ಎಂದು ಹಟ ಹಿಡಿದಳು.

ಇತ್ತ ಪ್ಲೆಟೋ ಕೂಡ ಫಲೇರಿಯನ್ನು ಬಿಡಲು ಸಿದ್ಧನಿರಲಿಲ್ಲ. ಕೊನೆಗೆ ಫಲೇರಿ ಆರು ತಿಂಗಳು ಅರಸನ ಬಳಿ ಇರಬೇಕು ಹಾಗೂ ಇನ್ನು ಆರು ತಿಂಗಳು ತನ್ನ ತಾಯಿಯ ಬಳಿ ಇರಬೇಕು ಎಂಬ ಒಪ್ಪಂದವನ್ನು ಜ್ಯೂಪಿಟರ್ ಮಾಡಿಸಿದ.

ಫಲೇರಿ ತನ್ನ ಪತಿಯ ಬಳಿಯಿದ್ದಾಗ ಭೂಮಿಯ ಮೇಲೆ ವಸಂತ ಋತು ಬರುವುದಂತೆ. ಅವಳು ತನ್ನ ತಾಯಿಯ ಬಳಿ ಸ್ವರ್ಗಕ್ಕೆ ಹೋದಾಗ ಭೂಮಿಯ ಮೇಲೆ ಮರದ ಎಲೆಗಳೆಲ್ಲ ಉದುರಿ ಮರಗಳು ಬೋಳಾಗುವುದಂತೆ. ಅಂದರೆ ಫಲೇರಿಯೇ ವಸಂತದ ದೇವತೆ ಎಂದಾಯಿತಲ್ಲವೆ!

(ಸಂಗ್ರಹ) **ಮುರಲೀಧರ ಕುಲಕರ್ಣಿ**

